## ಕರ್ನಾಟಕ ಸರ್ಕಾರದ ನಡವಳಿಗಳು

**ವಿಷಯ:** ನೂತನ ಜವಳಿ ನೀತಿಯಡಿ ನೀಡಲಾಗುತ್ತಿರುವ ತರಬೇತಿ ವೆಚ್ಚಗಳನ್ನು ಪರಿಷ್ಕರಿಸುವ ಬಗ್ಗೆ.

**ಓದಲಾಗಿದೆ:** 1. ದಿನಾಂಕ: 12.12.2016 ರಂದು ನಡೆದ ರಾಜ್ಯ ಮಟ್ಟದ ಯೋಜನಾ ಅನುಷ್ಠಾನ ಸಮಿತಿ (ಎಸ್.ಎಲ್.ಪಿ.ಐ.ಸಿ) ಸಭೆಯ ನಡವಳಿಗಳು.

2. ಜವಳಿ ಅಭಿವೃದ್ಧಿ ಆಯುಕ್ತರ ಪತ್ರ ಸಂಖ್ಯೆ: ಕೈಜಇ/ ನೂಜನಿ/ ಪ್ರದಸ/ ತರಬೇತಿ/ 2016-17, ದಿನಾಂಕ: 23.01.2017.

247
22/6/17

*************

**ಪ್ರಸ್ತಾವನೆ:**

ಓದಲಾದ (1) ರಲ್ಲಿ, ಕೈಮಗ್ಗ ಮತ್ತು ಜವಳಿ ಇಲಾಖೆಯಿಂದ ಸ್ಥಾಪಿತವಾಗಿರುವ 312 ಎಸ್.ಡಿ.ಸಿ. ಕೌಶಲ್ಯಾಭಿವೃದ್ಧಿ ಕೇಂದ್ರಗಳು ಮತ್ತು ನಿಯಮಾನುಸಾರ ಆಯ್ಕೆಗೊಂಡ ಎಸ್.ಎಂ.ಪಿ. ಖಾಸಗಿ ತರಬೇತಿ ಕೇಂದ್ರಗಳ ಮೂಲಕ ನೀಡಲಾಗುತ್ತಿರುವ ತರಬೇತಿ ಕಾರ್ಯಕ್ರಮಕ್ಕೆ ಸಂಬಂಧಿಸಿದಂತೆ, ತರಬೇತಿ ಕೇಂದ್ರದ ಖರ್ಚು ವೆಚ್ಚಗಳಿಗೆ ನೀಡುವ ಅನುದಾನವನ್ನು ಹೆಚ್ಚಿಸುವ ಬಗ್ಗೆ ಹಾಗೂ ಸದರಿ ಕೇಂದ್ರಗಳ ಮೂಲಕ ತರಬೇತಿ ಪಡೆಯುತ್ತಿರುವ ಅಭ್ಯರ್ಥಿಗಳಿಗೆ ನೀಡಲಾಗುವ ಶಿಷ್ಯ ವೇತನವನ್ನು ತರಬೇತಿ ಮುಗಿದ ನಂತರ ಒಂದೇ ಕಂತಿನಲ್ಲಿ ಬಿಡುಗಡೆ ಮಾಡುವ ಬಗ್ಗೆ ತೀರ್ಮಾನಿಸಲಾಗಿರುತ್ತದೆ.

ಓದಲಾದ (2) ರಲ್ಲಿ ಜವಳಿ ಅಭಿವೃದ್ಧಿ ಆಯುಕ್ತರು, 2017-18ನೇ ಸಾಲಿನಿಂದ ಅನ್ವಯವಾಗುವಂತೆ ನೂತನ ಜವಳಿ ನೀತಿ ಯೋಜನೆ ಅಡಿಯಲ್ಲಿ ನೀಡಲಾಗುತ್ತಿರುವ ತರಬೇತಿಗೆ ಸಂಬಂಧಿಸಿದಂತೆ ಶಿಷ್ಯ ವೇತನವನ್ನು 02 ಮೈಲುಗಲ್ಲುಗಳ ಆಧಾರದ ಮೇಲೆ ನೀಡುವ ಬದಲು ಒಂದೇ ಕಂತಿನಲ್ಲಿ ತರಬೇತಿ ಮುಗಿದ ನಂತರ ಫಲಾನುಭವಿಗಳಿಗೆ ಬಿಡುಗಡೆ ಮಾಡುವಂತೆ ಹಾಗೂ ತರಬೇತಿ ವೆಚ್ಚವನ್ನು ಕೆಳಕಂಡಂತೆ ಪರಿಷ್ಕರಿಸಲು ಆದೇಶ ಹೊರಡಿಸಬೇಕೆಂದು ಕೋರಿರುತ್ತಾರೆ.

DD (T&D)

(ರೂ.ಗಳಲ್ಲಿ)

| ಕ್ರ. ಸಂ | ತರಬೇತಿ ವಿಧ | ತರಬೇತಿ ಅವಧಿ | ಶಿಷ್ಯ ವೇತನ | ಕಚ್ಚಾ ಮಾಲು | ತರಬೇತಿ ಕೇಂದ್ರಕ್ಕೆ ನೀಡುವ ತರಬೇತಿ ವೆಚ್ಚ | | ಒಟ್ಟು ಘಟಕ ವೆಚ್ಚ | |
|---|---|---|---|---|---|---|---|---|
| | | | | | ಎಸ್.ಡಿ.ಸಿ | ಖಾಸಗಿ | ಎಸ್.ಡಿ.ಸಿ | ಖಾಸಗಿ |
| 1. | ಸೀವಿಂಗ್ ಮೆಷಿನ್ ಆಪರೇಟರ್ | 45 ದಿನಗಳು | 3500 | 1000 | 5000 | 6500 | 9500 | 11000 |
| 2. | ಕೈಮಗ್ಗ ನೇಯ್ಗೆ | 45 ದಿನಗಳು | 3500 | 1000 | 5000 | 6500 | 9500 | 11000 |
| 3. | ವಿದ್ಯುತ್ ಮಗ್ಗ ನೇಯ್ಗೆ | 45 ದಿನಗಳು | 3500 | 1000 | 5000 | 6500 | 9500 | 11000 |

DD(I)
23/6/17

23/6/17

ಜವಳಿ ಅಭಿವೃದ್ಧಿ ಆಯುಕ್ತರ ಪ್ರಸ್ತಾವನೆಯನ್ನು ಪರಿಶೀಲಿಸಿ, ಈ ಕೆಳಕಂಡಂತೆ ಆದೇಶ ಹೊರಡಿಸಿದೆ.

**ಸರ್ಕಾರಿ ಆದೇಶ ಸಂಖ್ಯೆ: ವಾಕೈ 09 ಜಕೈಯೋ 2017, ಬೆಂಗಳೂರು, ದಿನಾಂಕ:06.06.2017**

ಪ್ರಸ್ತಾವನೆಯಲ್ಲಿ ವಿವರಿಸಿರುವ ಹಿನ್ನೆಲೆಯಲ್ಲಿ, 2017-18ನೇ ಸಾಲಿನಲ್ಲಿ ನೂತನ ಜವಳಿ ನೀತಿ ಯೋಜನೆ ಅಡಿ ಕೌಶಲ್ಯಾಭಿವೃದ್ಧಿ ಕೇಂದ್ರಗಳು ಮತ್ತು ನಿಯಮಾನುಸಾರ ಆಯ್ಕೆಗೊಂಡ ಎಸ್.ಎಂ.ಓ. ಖಾಸಗಿ ತರಬೇತಿ ಕೇಂದ್ರಗಳ ಮೂಲಕ ನೀಡಲಾಗುತ್ತಿರುವ ತರಬೇತಿ ಕಾರ್ಯಕ್ರಮಕ್ಕೆ ಸಂಬಂಧಿಸಿದಂತೆ, ತರಬೇತಿ ಕೇಂದ್ರದ ಖರ್ಚು ವೆಚ್ಚಗಳಿಗೆ ನೀಡುವ ಅನುದಾನವನ್ನು ಪರಿಷ್ಕರಿಸಿದ್ದು, ಹಾಗೂ ಸದರಿ ಕೇಂದ್ರಗಳ ಮೂಲಕ ತರಬೇತಿ ಪಡೆಯುತ್ತಿರುವ ಅಭ್ಯರ್ಥಿಗಳಿಗೆ ನೀಡಲಾಗುವ ಶಿಷ್ಯ ವೇತನವನ್ನು ತರಬೇತಿ ಮುಗಿದ ನಂತರ ಒಂದೇ ಕಂತಿನಲ್ಲಿ ಈ ಕೆಳಕಂಡಂತೆ ತರಬೇತಿ ವೆಚ್ಚವನ್ನು ಪರಿಷ್ಕರಿಸಿ, ಬಿಡುಗಡೆ ಮಾಡಲು ಆದೇಶಿಸಿದೆ.

(ರೂ.ಗಳಲ್ಲಿ)

| ಕ್ರ. ಸಂ | ತರಬೇತಿ ವಿಧ | ತರಬೇತಿ ಅವಧಿ | ಶಿಷ್ಯ ವೇತನ | ಕಚ್ಚಾ ಮಾಲು | ತರಬೇತಿ ಕೇಂದ್ರಕ್ಕೆ ನೀಡುವ ತರಬೇತಿ ವೆಚ್ಚ | | ಒಟ್ಟು ಘಟಕ ವೆಚ್ಚ | |
|---|---|---|---|---|---|---|---|---|
| | | | | | ಎಸ್.ಡಿ.ಸಿ | ಖಾಸಗಿ | ಎಸ್.ಡಿ.ಸಿ | ಖಾಸಗಿ |
| 1. | ಸೀನಿಯರ್ ಮೆಷಿನ್ ಆಪರೇಟರ್ | 45 ದಿನಗಳು | 3500 | 1000 | 5000 | 6500 | 9500 | 11000 |
| 2. | ಕೈಮಗ್ಗ ನೇಯ್ಗೆ | 45 ದಿನಗಳು | 3500 | 1000 | 5000 | 6500 | 9500 | 11000 |
| 3. | ವಿದ್ಯುತ್ ಮಗ್ಗ ನೇಯ್ಗೆ | 45 ದಿನಗಳು | 3500 | 1000 | 5000 | 6500 | 9500 | 11000 |

ಈ ಸಂಬಂಧದಲ್ಲಿ 2017-18ನೇ ಸಾಲಿನ ನೂತನ ಜವಳಿ ನೀತಿ ಯೋಜನೆಯ ಲೆಕ್ಕಶೀರ್ಷಿಕೆ:2852-08-202-7-01-106, 2852-08-202-7-01-422(ಎಸ್.ಸಿ.ಪಿ) ಮತ್ತು 2852-08-202-7-01-423 (ಟಿ.ಎಸ್.ಪಿ) ಅಡಿಯಲ್ಲಿ ಮಾತ್ರ ವೆಚ್ಚ ಭರಿಸತಕ್ಕದ್ದು.

ನೂತನ ಜವಳಿ ನೀತಿ ಯೋಜನೆಯಡಿ ಒಟ್ಟಾರೆ ಅನುದಾನದ ಪೈಕಿ ತರಬೇತಿ ಉದ್ದೇಶಕ್ಕಾಗಿ ನಿಗದಿಪಡಿಸಿಕೊಂಡಿರುವ ಮೊತ್ತದಲ್ಲಿ ತರಬೇತಿ ವೆಚ್ಚ ಹಾಗೂ ಶಿಷ್ಯ ವೇತನದ ವೆಚ್ಚವನ್ನು ಭರಿಸತಕ್ಕದ್ದು.

ಈ ಆದೇಶವನ್ನು ಆರ್ಥಿಕ ಇಲಾಖೆಯ ಟಿಪ್ಪಣಿ ಸಂಖ್ಯೆ: ಆಇ 183 ವೆಚ್ಚ-1 2017, ದಿನಾಂಕ: 26-05-2017 ರಲ್ಲಿ ನೀಡಿರುವ ಸಹಮತಿಯ ಮೇರೆಗೆ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ,

**(ಡಿ.ಎಸ್.ಹೋಗೋಹೆ)**
**ಸರ್ಕಾರದ ಉಪ ಕಾರ್ಯದರ್ಶಿ (ಜವಳಿ)**
ವಾಣಿಜ್ಯ ಮತ್ತು ಕೈಗಾರಿಕೆ ಇಲಾಖೆ.
6/6/17

ಗೆ:

1. ಮಹಾಲೇಖಪಾಲರು,(ಲೆಕ್ಕಪತ್ರ:ಲೆಕ್ಕಪರಿಶೋಧನೆ) ಕರ್ನಾಟಕ, ಬೆಂಗಳೂರು.

2. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ, ವಾಣಿಜ್ಯ ಮತ್ತು ಕೈಗಾರಿಕೆ ಇಲಾಖೆ, ಬೆಂಗಳೂರು.
3. ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಯೋಜನಾ ಇಲಾಖೆ, ಬಹುಮಹಡಿ ಕಟ್ಟಡ, ಬೆಂಗಳೂರು.
4. ಜವಳಿ ಅಭಿವೃದ್ಧಿ ಆಯುಕ್ತರು ಹಾಗೂ ನಿರ್ದೇಶಕರು, ಕೈಮಗ್ಗ ಮತ್ತು ಜವಳಿ, ಬೆಂಗಳೂರು.
5. ಆಂತರಿಕ ಆರ್ಥಿಕ ಸಲಹೆಗಾರರು, ವಾಣಿಜ್ಯ ಮತ್ತು ಕೈಗಾರಿಕೆ ಇಲಾಖೆ, ಬೆಂಗಳೂರು.
6. ಸರ್ಕಾರದ ಅಧೀನ ಕಾರ್ಯದರ್ಶಿ, ಆರ್ಥಿಕ ಇಲಾಖೆ(ವೆಚ್ಚ-1), ವಿಧಾನಸೌಧ, ಬೆಂಗಳೂರು.
7. ನಿರ್ದೇಶಕರು, ರಾಜ್ಯ ಹುಜೂರು ಖಜಾನೆ, ಬೆಂಗಳೂರು.
8. ಜಂಟಿ ನಿರ್ದೇಶಕರು, ಜಿಲ್ಲಾ ಖಜಾನೆ, ಬೆಂಗಳೂರು.
9. ಶಾಖಾ ರಕ್ಷಾಕಡತ/ಹೆಚ್ಚುವರಿ ಪ್ರತಿಗಳು.